'ಬರೀ ಕಲಿಸುವುದು ಎಂತ ಮಣ್ಣಾಂಗಟ್ಟಿ. ಕೋವಿ ಹಿಡಿದು ಕಾದಾಡಬೇಕು. ನನ್ನ ಅಪ್ಪಯ್ಯ ಹುಲಿಯನ್ನೇ ಕೊಂದಿಲ್ಲವೇ' ಎಂದು ಸೇನೆಗೆ ಸೇರಿಕೊಂಡೆ. ಉತ್ತರ ಪಶ್ಚಿಮ ಈಶಾನ್ಯ ಎಲ್ಲ ಕಡೆ ಓಡಾಡಿದೆ. ಬಂಗಾಲದಲ್ಲಿ ಪಾಕಿಸ್ತಾನಿಯರನ್ನು, ಈಶಾನ್ಯದಲ್ಲಿ ನಾಗಾಗಳ, ಉತ್ತರದಲ್ಲಿ ಚೀನೀಯರ ಒಂದಿಷ್ಟು ತಲೆಗಳನ್ನು ಹಾರಿಸಿದೆ.

ಅದೂ ಸಾಕು ಅನಿಸಿತು. ವಾಪಸು ಬಂದೆ. ಅಪ್ಪಯ್ಯ ಸತ್ತ. ಅವನಿಗೆ ಬೆಂಕಿಕೊಟ್ಟೆ.

ಮಡಿಕೇರಿ ಕಾಲೇಜಿಗೆ ಪ್ರೊಫೆಸರನಾಗಿ ಸೇರಿಕೊಂಡೆ. ಹೋಟೆಲನ್ನೂ ನೋಡಿಕೊಂಡೆ. ತೋಟವನ್ನೂ ಬಿಡಲಿಲ್ಲ. ಮದುವೆಯೂ ಆದೆ. ಸೊಸೆಯೂ ಬಂದಳು.

ಈಗ ನನ್ನ ಮಗನೇ ನನ್ನ ಪರಮ ವೈರಿ. ಅವನ ತಾಯಿ ಹಾಸಿಗೆ ಸೇರಿ ಸಾಯುವಂತಾಗಲು ನಾನೇ ಕಾರಣ ಅಂತ ಅವನ ಗುಮಾನಿ. ನಿಜ ಹೇಳುವುದಾದರೆ ಅವನು ದೊಡ್ಡ ಸೋಮಾರಿ. ಅವನಿಗೆ ಕಷ್ಟಪಡಲು ಕಷ್ಟಗಳೇ ಇರಲಿಲ್ಲ. ನಡೆದು ಸೇರಲು ಗುರಿಗಳೂ ಇರಲಿಲ್ಲ. ಪರಿಸರ ಅಂತೆ. ಶೂನ್ಯ ಕೃಷಿ ಅಂತೆ. ಅವನ ಪಿಂಡ. ಹೆಂಡತಿಯ ಜೊತೆ ಸುಖವಾಗಿರುವ ಹಣೆಯ ಬರಹವೂ ಅವನಿಗಿಲ್ಲ. ಮೂರ್ಖ ಜನ್ಮ ಅವನದ್ದು.

ನಾನಾದರೂ ಎಷ್ಟು ಅಂತ ಬುದ್ಧಿ ಹೇಳುವುದು. ಗೋಡೆಯಲ್ಲಿ ತೂಗುಹಾಕಿದ್ದ ಜೋಡುನಳಿಕೆಯ ಕೋವಿಯನ್ನು ಒಂದು ದಿನ ಅವನ ಹಣೆಗೆ ಹಿಡಿದೆ.

'ಒಂದೋ ನಾನು ಹೇಳಿದ ಹಾಗೆ ತೋಟ ನೋಡು. ಇಲ್ಲಾ ಹೆಂಡತಿಯ ಜೊತೆ ಜಾಗ ಖಾಲಿ ಮಾಡು' ಅಂದೆ.

ಅವನಿಗೆ ಅದೇ ಬೇಕಾಗಿತ್ತು ಕಾಣುತ್ತದೆ.

'ಹೆಂಡತಿಯೂ ಬೇಡ, ತೋಟವೂ ಬೇಡ ಎಲ್ಲ ನೀನೇ ಇಟ್ಟುಕೋ' ಅಂತ ಹೊರಟ.

ಅವನು ಪೆದ್ದು ಮೂರ್ಖ. ಅವನೇ ಮೊದಲು ಆ ಕೋವಿಯನ್ನು ನನ್ನ ಹಣೆಗೆ ಹಿಡಿದಿದ್ದರೆ ಪಾಪ, ಸುಖವಾಗಿ ಬದುಕುತ್ತಿದ್ದ. ಅಪ್ಪಟ ಸಾತ್ವಿಕ ಅವನು, ನನ್ನ ಅಜ್ಜನ ಹಾಗೆ.

ಈಗ ನೋಡಿ, ನನ್ನ ಚಿತೆಗೆ ಬೆಂಕಿ ಇಡಲೂ ಅವನಿಗೆ ಇಲ್ಲಿ ಬರಲಾಗುವುದಿಲ್ಲ ಸಾಹೇಬರೇ' ಎಂದು ಗಹಗಹಿಸಿ ನಕ್ಕಿದ್ದರು.

ಅವರಿಗೆ ಸಿಟ್ಟು ಬಂದಾಗಲೂ ಗಹಗಹಿಸಿ ಬರುವ ನಗು. ಸಾಹಿತ್ಯ ಮಾತನಾಡುವಾಗಲೂ, ರಾಜಕೀಯ ಚರ್ಚಿಸುವಾಗಲೂ, ದೇವರು, ಧರ್ಮ, ಸ್ತ್ರೀ ಸೌಂದರ್ಯ, ಮೈಥುನ ಏನು ಹೇಳುವಾಗಲೂ ಕೊನೆಯಲ್ಲಿ ಬರುವುದು ನಗು.

ಅವರ ಜೊತೆಯಲ್ಲಿ ಇಂತಹದೇ ವಿಷಯಗಳನ್ನು ಹೇಳಿಕೊಂಡು ಗಹಗಹಿಸಿ ನಗಲು ನಾನು. ಹೇಳಿಕೊಳ್ಳಲು ನನ್ನ ಜೀವನದಲ್ಲೂ ಅಂತಹದೇ ಪುಂಖಾನುಪುಂಖ ಸಂಗತಿಗಳು.

ನನಗೂ ಒಬ್ಬ ಮುತ್ತಜ್ಜ ಇದ್ದ. ಅವರು ಬಹುಶಃ ನೂರು ವರ್ಷ ಬದುಕಿದ್ದರು. ಅವರ ಹೆಸರು ಈಸಾ ಮುಸಿಲಿಯಾರ್ ಎಂದೋ ಏನೋ ಇರಬೇಕು. ಅವರು ಸಾಯುವ ವರೆಗೂ ಅವರ ಬಳಿ ಹರಿತವಾದ ಒಂದು ಖಡ್ಗ ಇತ್ತು. ಆ ಖಡ್ಗ ಟೀಪೂ ಸುಲ್ತಾನನ ವಿರುದ್ಧ ಹೋರಾಡಲು ಕೊಡಗಿನ ರಾಜ ಅವರ ಹಿರಿಯರಿಗೆ ಕೊಟ್ಟಿದ್ದಂತೆ. ಆ ಮುತ್ತಜ್ಜನ ಹಿರಿಯರು ಓಮಾನು ದೇಶದ ಕಾಡು ಜನಾಂಗಕ್ಕೆ ಸೇರಿದವರಂತೆ. ಅವರು ನೂರಾರು ವರ್ಷಗಳ ಹಿಂದೆ ಅರಬಿ ಕಡಲಿನ ಮೂಲಕ ಹಾಯಿ ದೋಣಿ ಹತ್ತಿ ಪರಾರಿಯಾಗಿ ಬಂದು ಕೊಡಗಿನ ಕಾಡಲ್ಲಿ ಒಂದು ಗುಂಪಾಗಿ ಬದುಕುತ್ತಿದ್ದರಂತೆ. ಅವರು ಹಾಗೆ ಭಯದಲ್ಲಿ ಓಡಿ ಬರಲು ಕಾರಣ ಅರೇಬಿಯಾದ ಖಲೀಫರು ತಮ್ಮನ್ನು ಹಿಡಿದು ಮುಸಲ್ಮಾನರನ್ನಾಗಿ ಮಾಡಬಹುದು ಎಂಬ ಹೆದರಿಕೆ. ಆದರೆ, ತಮಾಷೆ ನೋಡಿ. ಕಾಡಲ್ಲಿ ಹೆದರಿಕೊಂಡು ಬದುಕುತ್ತಿದ್ದ ಅವರನ್ನು ಕೊಡಗಿನ ರಾಜ ಸೈನ್ಯಕ್ಕೆ ಸೇರಿಸಿಕೊಂಡ. ಖಡ್ಗ ಕೊಟ್ಟು